ಹುಬ್ಬಳ್ಳಿ-ಧಾರವಾಡ ಮಾರ್ಗದ ರಾಷ್ಟ್ರೀಯ ಹೆದ್ದಾರಿ ಕೆಲಸ

2558-ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹುಬ್ಬಳ್ಳಿ-ಧಾರವಾಡ ಮಾರ್ಗ ರಾಷ್ಟ್ರೀಯ ಹೆದ್ದಾರಿ ರಸ್ತೆ ಎಷ್ಟು ಕಿ.ಮೀ. ಕೆಲಸವಾಗಿದೆ?

ಆ) ಈ ಕೆಲಸಕ್ಕೆ ಖರ್ಚು ಮಾಡಲಾದ ಹಣವೆಷ್ಟು?

ಇ) ಸದರಿ ರಸ್ತೆಯ ಕೆಲಸಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಜಿ.ಪಿಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಹುಬ್ಬಳ್ಳಿ-ಧಾರವಾಡ ನಗರಗಳ ಹೊರವಲಯ ರಸ್ತೆಯ ಒಟ್ಟು ಉದ್ದ 29.90 ಕಿ.ಮೀ. ಇದ್ದು (ಕಿ.ಮೀ. 0 ರಿಂದ 29.90ರವರೆಗೆ) ಅದರಲ್ಲಿ ಮಣ್ಣು ಮತ್ತು ಸೇತುವೆ ಕೆಲಸಗಳು ಮೊದಲನೇ ಹಂತದ 17.42 ಕಿ.ಮೀ. ಅಂದರೆ ಕಿ.ಮೀ. 12.475 ರಿಂದ 29.90 ರವರೆಗೆ ಮುಗಿದಿದ್ದು, ಈಗ ಜಲ್ಲಿ ಹಾಕುವ ಕೆಲಸ ನಡೆದಿರುತ್ತದೆ.

ಕಿ.ಮೀ. 0 ರಿಂದ 12.475 ರವರೆಗಿನ ಎರಡನೇ ಹಂತದ ಕೆಲಸಕ್ಕೆ ತಾಂತ್ರಿಕ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು, ಮಂಜೂರಾತಿ ದೊರೆತನಂತರ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಇಲ್ಲಿಯವರೆಗೆ ಸುಮಾರು 315.40 ಲಕ್ಷ ರೂ.ಗಳು ಖರ್ಚಾಗಿದೆ.

ಇ) ಮೊದಲನೇ ಹಂತದಲ್ಲಿ ಬರುವ ಕೆಲಸಗಳನ್ನು ಮಾರ್ಚ್ 1993ರವರೆಗೆ ಮುಗಿಸುವ ಅಂದಾಜಿದೆ.

ಸುರ್ಗಿತೋಪು ಏತ ನೀರಾವರಿ ಕೆಲಸಕ್ಕೆ ಖರ್ಚಾದ ಹಣ.

2540 - ಕುಮಾರಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರ್ಗಿತೋಪು ಏತ ನೀರಾವರಿ ಕೆಲಸ ಎಂದಿನಿಂದ ಪ್ರಾರಂಭವಾಯಿತು? ಇದಕ್ಕಾಗಿ ಮಂಜೂರು ಮಾಡಿದ ಹಣವೆಷ್ಟು? ಇದು ಈಗ ಯಾವ ಹಂತದಲ್ಲಿದೆ?

ಆ) ಇನ್ನೂ ಎಷ್ಟು ತಿಂಗಳಲ್ಲಿ ಕೆಲಸವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಬೆಳಕವಾಡಿ ಗ್ರಾಮದ ಸುರ್ಗಿತೋಪು ಸಮೀಪ ಏತ ನೀರಾವರಿ ಯೋಜನೆಯು 47.80 ಲಕ್ಷ ರೂ.ಗಳಿಗೆ 1984-85ನೇ ಸಾಲಿನಲ್ಲಿ ಅಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, 1986-87ನೇ ಸಾಲಿನಲ್ಲಿ ಕಾಮಗಾರಿಯು ಪ್ರಾರಂಭವಾಯಿತು. 1991ನೇ ಸಾಲಿನ ಜುಲೈ ಅಂತ್ಯದವರೆಗೆ 19.75 ಲಕ್ಷ ರೂ.ಗಳು ಖರ್ಚಾಗಿರುತ್ತದೆ. ಈ ಕಾಮಗಾರಿಯ ವಿವಿಧ ಹಂತಗಳು ಈ ರೀತಿ ಇವೆ.

1. ಇಂಟೇಕ್ ಮುಗಿದಿದೆ.

2. ಕನೆಕ್ಟಿಂಗ್ ಮೈನ್ ಮುಗಿದಿದೆ

3. ಜಾಕ್‌ವೆಲ್ ಕಂ ಪಂಪ್‌ಹೌಸ್ ಅರ್ಧ ಭಾಗ ಮುಗಿದಿದೆ

4. ರೈಸಿಂಗ್ ಮೈನ್ ಟೆಂಡರ್ ಕರೆದಿದೆ.

5. ಪಂಪ್ ಮಿಷನ್ ಟೆಂಡರ್ ಕರೆದಿದೆ

6. ಕಾಲುವೆ ಭಾಗಶಃ ಮುಗಿದಿದೆ.

7. ಕಟ್ಟಡಗಳು ಭಾಗಶಃ ಮುಗಿದಿದೆ.

ಆ) ಈ ಕಾಮಗಾರಿಯನ್ನು 1992ರ ಖಾರೀಫ್ ವೇಳೆಗೆ ಮುಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಬೀದರ್ ಪರಿಷತ್ ಮುಖ್ಯ ಕಾರ್ಯದರ್ಶಿಯವರ ನಿಯೋಜನೆ.

2576 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲಾಪರಿಷತ್ ಮುಖ್ಯ ಕಾರ್ಯದರ್ಶಿಯವರನ್ನು ಬೇರೆ ಜಾಗಕ್ಕೆ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿದೆಯೇ?

ಆ) ಇದರಿಂದ ಬೀದರಿನ ಸಾರ್ವಜನಿಕರಿಗೆ ಯಾವ ಕೆಲಸ ಕಾರ್ಯಗಳು ಆಗದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಆ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಹೊಸದುರ್ಗ ಪಟ್ಟಣದ ಮಧ್ಯೆ ಹಾದುಹೋಗುವ ಮುಖ್ಯ ರಸ್ತೆಯ ಬಗ್ಗೆ

2599-ಶ್ರೀ ಇ. ವಿಜಯ ಕುಮಾರ್ (ಹೊಸದುರ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ಪಟ್ಟಣದ ಮಧ್ಯೆ ಹಾದುಹೋಗುವ ಮುಖ್ಯ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದೆಯೇ?

ಆ) ಹಾಗಿದ್ದಲ್ಲಿ ಅದರ ದುರಸ್ತಿ ಕಾರ್ಯದ ಬಗ್ಗೆ ವಿಷಯವು ಸರ್ಕಾರದ ಮುಂದೆ ಇದೆಯೇ?

ಇ) ಹಾಗಾದರೆ, ಎಷ್ಟು ಸಮಯದಲ್ಲಿ ಈ ಕಾಮಗಾರಿ ಕಾರ್ಯ ಮುಗಿಯಲು ಸಾಧ್ಯತೆ ಇದೆ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಹೊಸದುರ್ಗ ಪಟ್ಟಣದ ಮದ್ಯದಲ್ಲಿ ಹಾದುಹೋಗುವ ಹುಳಿಯಾರು ಆನೆಗೋಡು ರಾಜ್ಯ ಹೆದ್ದಾರಿಯು ಲೋಕೋಪಯೋಗಿ ಇಲಾಖೆಗೆ ಸೇರಿದೆ.

ಆ) 3.50ಲಕ್ಷ ರೂ.ಗಳ ಅಂದಾಜಿನಲ್ಲಿ ರಸ್ತೆ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.